ನಮ್ಮ ಮನರಂಜನೆಗೆಂದೇ ವಿವಿಧ ಪ್ರಾಣಿಗಳು ತಯಾರಾಗಿದ್ದವು. ದೊಡ್ಡ ಪಂಜರವೊಂದರಲ್ಲಿ ಬಾಕ್ಸಿಂಗ್ ಗ್ಲೌಸ್ ಧರಿಸಿದ ಒರಾಂಗುಟಾನ್ ತಳಿಯ ಮಂಗಗಳು ಒಂದಕ್ಕೊಂದು ಕೈ ಕೈ ಮಿಲಾಯಿಸಿ ಹೊಡೆದಾಡುತ್ತಿದ್ದವು (ಅದೂ ಗಂಡು ಕೋತಿ ಬರ್ಮುಡಾ ಚಡ್ಡಿ ಧರಿಸಿ, ಹೆಣ್ಣು ಕೆಂಪು ಬಣ್ಣದ ಬಿಕನಿ ತೊಟ್ಟು!). ಅಂಗಳವೊಂದರಲ್ಲಿ ಆನೆಗಳು ಫುಟ್‌ಬಾಲ್ ಆಡುತ್ತ, ವಿವಿಧ ಕಸರತ್ತುಗಳನ್ನು ಮಾಡುತ್ತಿದ್ದವು. ಇನ್ನೊಂದೆಡೆ, ಕಾಲಿನಿಂದ ಕುತ್ತಿಗೆಯ ತನಕ ಮೈಮೇಲೆ ಚೇಳುಗಳನ್ನು ಹತ್ತಿಸಿಕೊಂಡು ಹೆಂಗಸೊಬ್ಬಳು ನಿಂತಿದ್ದಳು. ನಿಮಗೂ ಆಸಕ್ತಿಯಿದ್ದರೆ ಮೈಕೈಮೇಲೆ ಚೇಳು ಹರಿಬಿಟ್ಟುಕೊಳ್ಳುವ ಅವಕಾಶವಿತ್ತಲ್ಲಿ.

ಇವುಗಳನ್ನೆಲ್ಲಾ ಅಚ್ಚರಿಯಿಂದ ನೋಡುತ್ತ ಕೊನೆಯಲ್ಲಿ ಬಂದರೆ, ಅಲ್ಲಿದ್ದುದು ಇಡೀ ಉದ್ಯಾನದ ಆಕರ್ಷಣೆಯ ಕೇಂದ್ರ ಸ್ಥಾನ. ವಾರೆಂಟ್ ಸಾಟ್ ಎನ್ನುವ ಈ ವ್ಯಕ್ತಿ ನನಗೆ ಸಿಕ್ಕಿದ್ದೂ ಅಲ್ಲಿಯೇ.

ಅಲ್ಲಿ, ಸಧೃಡವಾಗಿ ಬೆಳೆದ ಕಟ್ಟುಮಸ್ತಿನ ಹುಲಿಗಳ ಬೆನ್ನ ಮೇಲೆ ಕೈ ಇಟ್ಟು ನೀವು ಫೋಟೊ ತೆಗೆಸಿಕೊಳ್ಳಬಹುದು. ಅವುಗಳ ಕುತ್ತಿಗೆಯ ಸರಪಳಿ ಹಿಡಿದು ನಾಯಿಯ ಜೊತೆ ವಾಕಿಂಗ್ ಹೋದಂತೆ ಒಂದು ಸುತ್ತು ನಡೆದಾಡಿ ವಿಡಿಯೊ ಮಾಡಬಹುದು. ಹುಲಿಯೊಂದು ತನ್ನ ಕತ್ತು ತುಸುವೇ ತಿರುಗಿಸಿದರೂ, ಕಾಲನ್ನು ಎತ್ತಿ ಒಂದೇ ಹೆಜ್ಜೆ ಮುಂದಿಟ್ಟರೂ ಅದರಲ್ಲಿ ವಿಶೇಷ ಆಕರ್ಷಣೆಯಿದೆಯಷ್ಟೇ? ಅಂಥದ್ದರಲ್ಲಿ ಅದರ ಬೆನ್ನು ಸವರುವ ಅವಕಾಶವೆಂದರೆ ಕೇಳಬೇಕೆ? ಬಹಳಷ್ಟು ಪ್ರವಾಸಿಗರು ಅಲ್ಲಿ ನೆರೆದು ಅತ್ಯುತ್ಸಾಹದಿಂದ ಓಡಾಡುತ್ತ ಫೋಟೊ-ವಿಡಿಯೊ ಮಾಡುವಲ್ಲಿ ತಲ್ಲೀನರಾಗಿದ್ದರು. ಬೇಕಾದರೆ ಹುಲಿಯ ಮೂತಿಗೆ ಕೋಲಿನಿಂದ ಜೋರಾಗಿ ತಿವಿದು ಅದು ಬಾಯಿ ತೆರೆದು ಗರ್ಜಿಸುವಂತೆಯೂ ಮಾಡಲಾಗುತ್ತದೆ. ಆಗ ಗರ್ಜಿಸುತ್ತಿರುವ ಹುಲಿಯ ಪಕ್ಕ ನಿಂತು ಫೋಟೊ ತೆಗೆಸಿಕೊಂಡ ಹೆಮ್ಮೆ ನಿಮ್ಮದಾಗುತ್ತದೆ. ಅದಕ್ಕಾಗಿ ನೀವು ಸ್ವಲ್ಪ ಹೆಚ್ಚು ಹಣ ನೀಡಬೇಕಷ್ಟೇ.

ಇದೆಲ್ಲ ಹೇಗೆ ಎಂದು ದಿಗ್ಭ್ರಮೆಗೊಳ್ಳುತ್ತ ತುಸು ದೂರದಿಂದಲೇ ನಾವು ಅಲ್ಲಿ ನಡೆಯುತ್ತಿರುವುದನ್ನು ವೀಕ್ಷಿಸುತ್ತಿದ್ದೆವು. ಅಲ್ಲೇ ನಮ್ಮ ಪಕ್ಕದಲ್ಲಿ ಸುಮಾರು ಹೊತ್ತಿನಿಂದ ಇವೆಲ್ಲವನ್ನೂ ಒಂದು ಸ್ಥಾಯೀಭಾವದಲ್ಲಿ ನೋಡುತ್ತ ನಿಂತಿದ್ದ ವ್ಯಕ್ತಿ ನನ್ನ ಗಮನಕ್ಕೆ ಬಾರದಿರಲಿಲ್ಲ. ಎಪ್ಪತ್ತರ ಹತ್ತಿರದ ವಯಸ್ಸು, ನೋಡಲು ಥಾಯ್ಲೆಂಡ್ ದೇಸಿಗನಂತೆಯೇ ಇದ್ದ. ಕೂದಲನ್ನು ಹಿಂದಕ್ಕೆ ಕಟ್ಟಿ ಜುಟ್ಟು ಬಿಟ್ಟಿದ್ದ. ಪಂಚೆಯಂತೆ ಕಾಣುವ ದೊಗಳೆ ಪ್ಯಾಂಟು, ಟೀಶರ್ಟ್ ಧರಿಸಿದ್ದ. ಅತ್ತ, ಹುಲಿಯೊಡನೆ ಫೋಟೊ ತೆಗೆಸಿಕೊಳ್ಳುವ ಹುಮ್ಮಸ್ಸಿನಲ್ಲಿದ್ದ ಗುಂಪಿನಲ್ಲಿಯ ಒಬ್ಬ ಇನ್ನೊಬ್ಬನಿಗೆ, ‘ಹುಲಿಯ ಕಣ್ಣುಗಳು ಲೆನ್ಸಿಗೆ ಕಾಂಟಾಕ್ಟ್ ಆಗಬೇಕು, ಆಗ ಫೋಟೊ ಅಮೋಘವಾಗಿ ಬರುತ್ತದೆ’ ಎನ್ನುವ ಸಲಹೆ ನೀಡುತ್ತಿದ್ದರೆ, ಅದನ್ನು ಕೇಳಿಸಿಕೊಂಡ ನನ್ನ ಪಕ್ಕದಲ್ಲಿಯ ಈ ಜುಟ್ಟಿನ ವ್ಯಕ್ತಿ, ‘ಅದು ಸಹಜವಾಗಿರುವ ಹುಲಿಗಳಿಗೆ ಅಪ್ಲೈ ಆಗುವ ಸಂಗತಿ ಮರುಳಾ, ಇವುಗಳಿಗಲ್ಲ. ಪ್ರಾಣಿಗಳ ಕಣ್ಣು ಎಂದೂ ಸುಳ್ಳು ಹೇಳುವುದಿಲ್ಲ...’ ಎಂದು ತನ್ನಷ್ಟಕ್ಕೇ ತಾನು ಗೊಣಗಿಕೊಂಡ.

ಆ ಮಾತು ನನ್ನ ಕುತೂಹಲ ಕೆರಳಿಸಿ, ಅದೇನೆಂದು ನಾನು ಆತನಲ್ಲಿ ವಿಚಾರಿಸಿ, ಅಲ್ಲಿಂದಲೇ ನಮ್ಮಿಬ್ಬರ ಪರಿಚಯವೂ ಆಗಿ, ಇಬ್ಬರೂ ಉದ್ಯಾನವನದಲ್ಲಿ ಒಂದು ಸುತ್ತು ತಿರುಗಿಬಂದು, ರೆಸ್ಟಾರೆಂಟಿನಲ್ಲಿ ಬ್ಲಾಕ್ ಕಾಫಿ ಹೀರುತ್ತ ಕುಳಿತು ಮಾತನಾಡುವ ಘಟ್ಟಕ್ಕೆ ತಲುಪಿದ್ದು ಒಂದು ರೀತಿಯ ಕಾಕತಾಳೀಯವೇ.

* * *

ಅವನ ಹೆಸರು ವಾರೆಂಟ್ ಸಾಟ್. ಥಾಯ್ಲೆಂಡಿನವನೇ. ಅಮೆರಿಕನ್ ಸೈನ್ಯದಲ್ಲಿ ನಾಲ್ಕು ವರ್ಷ ಕೆಲಸ ಮಾಡಿರುವವ. ಹತ್ತೊಂಬತ್ತರ ಶತಕದಲ್ಲಿ ನಡೆದ ವಿಯಟ್ನಾಂ ಯುದ್ಧದಲ್ಲಿ ಭಾಗವಹಿಸಿದ್ದ – ಎನ್ನುವ ವಿವರಗಳನ್ನೆಲ್ಲ ಕೇಳಿ ತಿಳಿದ ನಾನು,

‘ಹಾಗಾದರೆ ನೀವು ನಿವೃತ್ತ ಅಮೇರಿಕನ್ ಯೋಧ ಅನ್ನಿ...’ ಎಂದೆ.

‘ಅಲ್ಲ, ನಾನೊಬ್ಬ ಪ್ರೊಫೆಷನಲ್ ಫೋಟೊಗ್ರಾಫರ್’ ಎಂದು ಉತ್ತರಿಸಿದ ಆತ.

ನನಗಾದ ಆಶ್ಚರ್ಯದ ಅರಿವಾಗಿರಬೇಕು ಅವನಿಗೆ. ‘ಇಲ್ಲಿ ನೋಡಿ, ನಾನು ತೆಗೆದ ಫೋಟೊಗಳು’ ಎನ್ನುತ್ತ ತನ್ನ ಮೊಬೈಲಿನಲ್ಲಿ ಹತ್ತಾರು ಅಮೆರಿಕನ್ ರೂಪದರ್ಶಿಗಳ ವಿವಿಧ ಭಂಗಿಯ ಮಾದಕ ಫೋಟೊಗಳನ್ನು ಸ್ಕ್ರಾಲ್ ಮಾಡಿ ತೋರಿಸಿದ. ಈತ ತಮಾಷೆ ಮಾಡುತ್ತಿರಬೇಕೆನ್ನಿಸಿತು ನನಗೆ. ನಂತರ, ತಾನು ನ್ಯೂಯಾರ್ಕಿನ ಫ್ಯಾಷನ್ ಮ್ಯಾಗಝಿನ್